**ಭೂತಾನ್‌ನ ಗೌರವಾನ್ವಿತ ನಾಲ್ಕನೇ ದೊರೆಯ 70 ನೇ ಜನ್ಮ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ಭಾಗಿ (ನವೆಂಬರ್ 11, 2025)**

ನವೆಂಬರ್ 11, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಭೂತಾನ್‌ನ ದೊರೆ, ರಾಜಕುಟುಂಬ, ಸರ್ಕಾರ ಮತ್ತು ಭೂತಾನ್‌ನ ಜನತೆಯೊಂದಿಗೆ ಥಿಂಪುವಿನ ಚಾಂಗ್ಲಿಮಿಥಾಂಗ್ ಸ್ಟೇಡಿಯಂನಲ್ಲಿ ನಡೆದ ಭೂತಾನ್‌ನ ನಾಲ್ಕನೇ ದೊರೆ, ಗೌರವಾನ್ವಿತ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ಅವರ 70 ನೇ ಜನ್ಮ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ, ಭೂತಾನ್‌ನ ಗೌರವಾನ್ವಿತ ದೊರೆ ದೆಹಲಿ ಸ್ಫೋಟದಲ್ಲಿ ಬಲಿಯಾದವರ ಸ್ಮರಣಾರ್ಥ ಸಾಮೂಹಿಕ ಪ್ರಾರ್ಥನೆ ನಡೆಸಿದರು.

2. ಪ್ರಧಾನಮಂತ್ರಿಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು ಮತ್ತು ಗೌರವಾನ್ವಿತ ನಾಲ್ಕನೇ ದೊರೆ ಮತ್ತು ಭೂತಾನ್ ಜನರಿಗೆ ಭಾರತದ ಜನರ ಪರವಾಗಿ ಶುಭಾಶಯಗಳನ್ನು ತಿಳಿಸಿದರು. ಭೂತಾನ್ ಅನ್ನು ಆಧುನಿಕ ರಾಷ್ಟ್ರವಾಗಿ ಮತ್ತು ಸಾಂವಿಧಾನಿಕ ಪ್ರಜಾಪ್ರಭುತ್ವ ರಾಜಪ್ರಭುತ್ವವಾಗಿ ಹೊರಹೊಮ್ಮಿಸಿದ ಮಹಾರಾಜರ ಪರಿವರ್ತಕ ಆಳ್ವಿಕೆಯನ್ನು ಅವರು ಎತ್ತಿ ತೋರಿಸಿದರು. ನಾಲ್ಕನೇ ದೊರೆಯ ನಾಯಕತ್ವದ ಅಡಿಯಲ್ಲಿ ಭೂತಾನ್, ಸುಸ್ಥಿರತೆಯೊಂದಿಗೆ ಆರ್ಥಿಕ ಬೆಳವಣಿಗೆಯನ್ನು ಸಮತೋಲನಗೊಳಿಸುವ ಒಟ್ಟು ರಾಷ್ಟ್ರೀಯ ಸಂತೋಷ ಎಂಬ ವಿಶಿಷ್ಟ ಪರಿಕಲ್ಪನೆಯನ್ನು ಪರಿಚಯಿಸಿತು.

3. ಭಾರತ ಮತ್ತು ಭೂತಾನ್ ನಡುವಿನ ವಿಶೇಷ ಸ್ನೇಹಕ್ಕೆ ಅಮೂಲ್ಯ ಕೊಡುಗೆ ನೀಡಿದ ಭೂತಾನ್‌ನ ಗೌರವಾನ್ವಿತ ನಾಲ್ಕನೇ ದೊರೆಗೆ ಪ್ರಧಾನಮಂತ್ರಿ ಧನ್ಯವಾದ ಸಲ್ಲಿಸಿದರು. ಗೌರವಾನ್ವಿತ ನಾಲ್ಕನೇ ದೊರೆಯು ಹಲವಾರು ವರ್ಷಗಳಿಂದ ದ್ವಿಪಕ್ಷೀಯ ಸಹಕಾರದ ಎಲ್ಲಾ ಕ್ಷೇತ್ರಗಳಲ್ಲಿ ಭಾರತ-ಭೂತಾನ್ ಪಾಲುದಾರಿಕೆಯನ್ನು ವೈಯಕ್ತಿಕವಾಗಿ ರೂಪಿಸಿದ್ದಾರೆ. ಈ ಸಂಬಂಧವು ಗೌರವಾನ್ವಿತ  ದೊರೆಯ ಮಾರ್ಗದರ್ಶನ ಮತ್ತು ಉತ್ತಮ ಸಲಹೆಗಳಿಂದ ಪ್ರಯೋಜನ ಪಡೆಯುವುದನ್ನು ಮುಂದುವರೆಸುತ್ತದೆ ಎಂದು ಪ್ರಧಾನಮಂತ್ರಿ ಹೇಳಿದರು.

4. ಭೂತಾನ್‌ನ ಗೌರವಾನ್ವಿತ ನಾಲ್ಕನೇ ದೊರೆಯ ಪ್ರಸಿದ್ಧ ಪರಂಪರೆಯನ್ನು ಯಶಸ್ವಿಯಾಗಿ ಮುಂದುವರಿಸುವಲ್ಲಿ ಪ್ರಸ್ತುತ ಗೌರವಾನ್ವಿತ ದೊರೆಯ ದೃಷ್ಟಿಕೋನ ಮತ್ತು ದೃಢವಾದ ಪ್ರಯತ್ನಗಳನ್ನು ಪ್ರಧಾನಮಂತ್ರಿ ಪ್ರಶಂಸಿಸಿದರು. ಅವರು ಭೂತಾನ್‌ನ ದೊರೆಯ ನಾಯಕತ್ವದಡಿಯಲ್ಲಿ ಆಗಿರುವ ಗಮನಾರ್ಹ ಪ್ರಗತಿಯನ್ನು ಹಾಗೂ ಭಾರತ-ಭೂತಾನ್ ನಡುವಿನ ಸ್ನೇಹ ಮತ್ತು ನಿಕಟ ಪಾಲುದಾರಿಕೆಯನ್ನು ಒತ್ತಿ ಹೇಳಿದರು. ಪ್ರಧಾನಮಂತ್ರಿಯ ಪೂರ್ಣ ಭಾಷಣವನ್ನು ಇಲ್ಲಿ ನೋಡಬಹುದು (ಲಿಂಕ್)

ಥಿಂಪು

ನವೆಂಬರ್ 11, 2025